6) ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಗಳು ನುಸಿ ನಿಯಂತ್ರಣೆ ಕ್ರಮಗಳನ್ನು ಕೈಗೊಳ್ಳುತ್ತಿವೆ.

ಈ ಉದ್ದೇಶಕ್ಕಾಗಿ ರೂ. 895.22 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಈ. ಈ ವಿಷಯವು ಅಬಕಾರಿ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ.

ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳು

1433 (1070) - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳಾವುವು;

ಆ) ಅವುಗಳಲ್ಲಿ 2000-01ರಲ್ಲಿ ಎಷ್ಟೆಷ್ಟು ಲಾಭ ಅಥವಾ ಹಾನಿ ಹೊಂದಿದೆ;

ಇ) ಅವುಗಳಲ್ಲಿ ನಷ್ಟ ಹೊಂದಿರುವ ಗಿರಣಿಗಳು 31-3-2001ಕ್ಕೆ ಹೊಂದಿದ ಕೂಡಿಬಿದ್ದ ಹಾನಿ ಎಷ್ಟು;

ಈ) ಹಾನಿಯಲ್ಲಿರುವ ಗಿರಣಿಗಳಿಗೆ ಕಳೆದ 3 ವರ್ಷಗಳಲ್ಲಿ ಸರ್ಕಾರ ನೀಡಿರುವ ಧನ ಸಹಾಯ ಎಷ್ಟು;

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ ಸ್ಥಾಪಿತವಾಗಿರುವ ಸಹಕಾರಿ ನೂಲಿನ ಗಿರಣಿಗಳು ಈ ರೀತಿ ಇವೆ:

1) ಬನಹಟ್ಟಿ ಸಹಕಾರಿ ನೂಲಿನ ಗಿರಣಿ (ನಿ), ಬಸವನಗರ, ಬನಹಟ್ಟಿ, ಬಾಗಲಕೋಟೆ ಜಿಲ್ಲೆ.

2) ಗದಗ್ ಸಹಕಾರಿ ಜವಳಿ ಗಿರಣಿ (ನಿ), ಹುಲಕೋಟೆ, ಗದಗ್ ಜಿಲ್ಲೆ.

3) ರೈತರ ಸಹಕಾರಿ ನೂಲಿನ ಗಿರಣಿ (ನಿ), ಹುಲಕೋಟೆ, ಗದಗ್ ಜಿಲ್ಲೆ.

4) ರೈತರ ಸಹಕಾರಿ ನೂಲಿನ ಗಿರಣಿ (ನಿ), ಹನುಮನಮಟ್ಟಿ, ರಾಣೇಬೆನ್ನೂರು ತಾಲ್ಲೂಕು.

5) ತುಂಗಭದ್ರಾ ರೈತರ ಸಹಕಾರಿ ನೂಲಿನ ಗಿರಣಿ (ನಿ), ರಾಣೇಬೆನ್ನೂರು (ಕಮದೋಡ)

6) ಬೆಳಗಾವಿ ಸಹಕಾರಿ ಹತ್ತಿ ನೂಲಿನ ಗಿರಣಿ(ನಿ), ಪಂತೆಬಾಳೇಕುಂದ್ರಿ, ಬೆಳಗಾಂ ತಾಲ್ಲೂಕು.

7) ಮಲಪ್ರಭಾ ಸಹಕಾರಿ ನೂಲಿನ ಗಿರಣಿ (ನಿ), ಸವದತ್ತಿ, ಬೆಳಗಾಂ ಜಿಲ್ಲೆ.

8) ವೆಂಕಟೇಶ ಸಹಕಾರಿ ನೂಲಿನ ಗಿರಣಿ (ನಿ) ಅಣ್ಣಿಗೇರಿ, ಧಾರವಾಡ ಜಿಲ್ಲೆ.

9) ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ (ನಿ) ಲಕ್ಷ್ಮೇಶ್ವರ.

10) ರಾಯಚೂರು ಸಹಕಾರಿ ನೂಲಿನ ಗಿರಣಿ (ನಿ), ರಾಯಚೂರು.

11) ಬಿಜಾಪುರ ಸಹಕಾರಿ ನೂಲಿನ ಗಿರಣಿ (ನಿ), ಬಿಜಾಪುರ (ಸಮಾಪನೆಯಲ್ಲಿದೆ)

12) ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ (ನಿ), ಬಾಗಲಕೋಟೆ (ಸಮಾಪನೆಯಲ್ಲಿದೆ).

ಆ) ಮೇಲೆ ತಿಳಿಸಿದ ಸಹಕಾರಿ ನೂಲಿನ ಗಿರಣಿಗಳು 2000-01ರಲ್ಲಿ ಗಳಿಸಿರುವ ಲಾಭ ಅಥವಾ ಹಾನಿಯ ವಿವರ ಈ ರೀತಿ ಇದೆ.

	ರೂ. ಲಕ್ಷಗಳಲ್ಲಿ
1) ಬನಹಟ್ಟಿ ಸಹಕಾರಿ ನೂಲಿನ ಗಿರಣಿ (ನಿ), ಬಸವನಗರ ಬನಹಟ್ಟಿ, ಬಾಗಲಕೋಟೆ ಜಿಲ್ಲೆ.	56.04
2) ಗದ್ಗ್ ಸಹಕಾರಿ ಜವಳಿ ಗಿರಣಿ (ನಿ), ಹುಲಕೋಟಿ, ಗದಗ ಜಿಲ್ಲೆ.	164.82
3) ರೈತರ ಸಹಕಾರಿ ನೂಲಿನ ಗಿರಣಿ (ನಿ), ಹುಲಕೋಟಿ, ಗದಗ ಜಿಲ್ಲೆ	94.22
4) ರೈತರ ಸಹಕಾರಿ ನೂಲಿನ ಗಿರಣಿ (ನಿ), ಹನುಮನಮಟ್ಟಿ, ರಾಣೆಬೆನ್ನೂರು ತಾಲ್ಲೂಕು.	338.53
5) ತುಂಗಭದ್ರಾ ರೈತರ ಸಹಕಾರಿ ನೂಲಿನ ಗಿರಣಿ (ನಿ), ರಾಣೇಬೆನ್ನೂರು (ಕಮದೋಡ)	198.82
6) ಬೆಳಗಾವಿ ಸಹಕಾರಿ ಹತ್ತಿ ಗಿರಣಿ (ನಿ), ಪಂತ್ ಬಾಳೇಕುಂದ್ರಿ ಬೆಳಗಾಂ ತಾಲ್ಲೂಕು	153.33
7) ಮಲಪ್ರಭಾ ಸಹಕಾರಿ ನೂಲಿನ ಗಿರಣಿ (ನಿ) ಸವದತ್ತಿ, ಬೆಳಗಾಂ ಜಿಲ್ಲೆ.	204.10
8) ವೆಂಕಟೇಶ ಸಹಕಾರಿ ನೂಲಿನ ಗಿರಣಿ (ನಿ), ಅಣ್ಣಿಗೇರಿ, ಧಾರವಾಡ ಜಿಲ್ಲೆ.	187.64
9) ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ (ನಿ), ಲಕ್ಷ್ಮೇಶ್ವರ	246.70
10) ರಾಯಚೂರು ಸಹಕಾರಿ ನೂಲಿನ ಗಿರಣಿ (ನಿ), ರಾಯಚೂರು	28.58
11) ಬಿಜಾಪುರ ಸಹಕಾರಿ ನೂಲಿನ ಗಿರಣಿ (ನಿ), ಬಿಜಾಪುರ (ಸಮಾಪನೆಯಲ್ಲಿದೆ)	ಸಮಾಪನೆಯಲ್ಲಿದೆ.
12) ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ (ನಿ), ಬಾಗಲಕೋಟೆ ಸಮಾಪನೆಯಲ್ಲಿದೆ)	ಸಮಾಪನೆಯಲ್ಲಿದೆ.

ಇ) ದಿನಾಂಕ:31-3-2001ಕ್ಕೆ ಗಿರಣಿಗಳು ಹೊಂದಿರುವ ಕೂಡಿ ಬಿದ್ದ ಹಾನಿಯ ವಿವರಗಳು ಈ ರೀತಿ ಇವೆ.

1) ಗದಗ್ ಸಹಕಾರಿ ಜವಳಿ ಗಿರಣಿ (ನಿ), ಹುಲಕೋಟಿ, ಗದಗ್ ಜಿಲ್ಲೆ	252.08
2) ರೈತರ ಸಹಕಾರಿ ನೂಲಿನ ಗಿರಣಿ (ನಿ), ಹುಲಕೋಟಿ ಗದಗ ಜಿಲ್ಲೆ	1332.19
3) ರೈತರ ಸಹಕಾರಿ ನೂಲಿನ ಗಿರಣಿ (ನಿ), ಹನುಮನಮಟ್ಟಿ ರಾಣೇಬೆನ್ನೂರು ತಾಲ್ಲೂಕು	3942.49
4) ತುಂಗಭದ್ರಾ ರೈತರ ಸಹಕಾರಿ ನೂಲಿನ ಗಿರಣಿ (ನಿ) ರಾಣೆಬೊನ್ನೂರು (ಕಮದೋಡ)	1674.36
5) ಬೆಳಗಾವಿ ಸಹಕಾರಿ ಹತ್ತಿ ನೂಲಿನ ಗಿರಣಿ (ನಿ) ಪಂತ್-ಬಾಳೇಕುಂದ್ರಿ, ಬೆಳಗಾಂ ತಾಲ್ಲೂಕು.	1564.48
6) ಮಲಪ್ರಭಾ ಸಹಕಾರಿ ನೂಲಿನ ಗಿರಣಿ (ನಿ), ಸವದತ್ತಿ, ಬೆಳಗಾಂ ಜಿಲ್ಲೆ	2985.62
7) ವೆಂಕಟೇಶ ಸಹಕಾರಿ ನೂಲಿನ ಗಿರಣಿ (ನಿ), ಅಣ್ಣಿಗೇರಿ, ಧಾರವಾಡ ಜಿಲ್ಲೆ	2791.31
8) ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ (ನಿ), ಲಕ್ಷ್ಮೇಶ್ವರ	2029.30
9) ರಾಯಚೂರು ಸಹಕಾರಿ ನೂಲಿನ ಗಿರಣಿ (ನಿ), ರಾಯಚೂರು	1055.85

ಈ) ಹಾನಿಯಲ್ಲಿರುವ ಸಹಕಾರಿ ನೂಲಿನ ಗಿರಣಿಗಳಿಗೆ ಕಳೆದ 3 ವರ್ಷಗಳಲ್ಲಿ ಸರ್ಕಾರ ನೀಡಿರುವ ಆರ್ಥಿಕ ಸಹಾಯಧನದ ವಿವರ ಈ ಕೆಳಕಂಡಂತಿದೆ;

ಗದಗ್ ಸಹಕಾರಿ ನೂಲಿನ ಗಿರಣಿ (ನಿ), ಹುಲಕೋಟಿ, ಈ ಗಿರಣಿಗೆ ಎನ್‌ಸಿಡಿಸಿ ಯೋಜನೆಯಡಿ ಗಿರಣಿಯ ಆಧುನೀಕರಣಕ್ಕಾಗಿ ಷೇರು ಬಂಡವಾಳವಾಗಿ ರೂ. 138.00 ಲಕ್ಷಗಳನ್ನು ಮತ್ತು ಸಾಲದ ರೂಪದಲ್ಲಿ ರೂ. 736.00 ಲಕ್ಷಗಳನ್ನು ನೀಡಿರುತ್ತದೆ.

ರಾಜ್ಯ ಸರ್ಕಾರವು ರೂ. 2991.16 ಲಕ್ಷಗಳನ್ನು ಈ ಕೆಳಕಂಡ ಸಹಕಾರಿ ನೂಲಿನ ಗಿರಣಿಗಳ ಪರವಾಗಿ ಒಂದೇ ಬಾರಿಗೆ ಚುಕ್ತಾ ಮಾಡಲು ಆರ್ಥಿಕ ಸಂಸ್ಥೆಗಳಿಗೆ ಖಾತ್ರಿದಾರರಾಗಿ ಹಣ ಪಾವತಿಸಿದೆ.

ಗಿರಣಿಯ ಹೆಸರು	ಸಾಲ ಲಕ್ಷ ರೂ.ಗಳಲ್ಲಿ
1. ರೈತರ ಸಹಕಾರಿ ನೂಲಿನ ಗಿರಣಿ (ನಿ), ಹುಲಕೋಟಿ, ಗದ್ಗ್ ಜಿಲ್ಲೆ	417.86
2. ಬೆಳಗಾಂ ಸಹಕಾರಿ ಹತ್ತಿ ನೂಲಿನ ಗಿರಣಿ, ಪಂತ್ ಬಾಳೇಕುಂದ್ರಿ, ಬೆಳಗಾಂ	592.42
3. ತುಂಗಭದ್ರ ರೈತರ ಸಹಕಾರಿ ನೂಲಿನ ಗಿರಣಿ (ನಿ), ರಾಣಿಬೆನ್ನೂರು (ಕಮದೋಡ)	531.03
4. ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ (ನಿ), ಲಕ್ಷ್ಮೇಶ್ವರ	555.89
5. ರಾಯಚೂರು ಸಹಕಾರಿ ನೂಲಿನ ಗಿರಣಿ (ನಿ), ರಾಯಚೂರು	385.64
6. ಬಿಜಾಪುರ ಸಹಕಾರಿ ನೂಲಿನ ಗಿರಣಿ (ನಿ), ಬಿಜಾಪುರ (ಸಮಾಪನೆಯಲ್ಲಿದೆ)	265.80
7. ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ (ನಿ), ಬಾಗಲಕೋಟೆ, (ಸಮಾಪನೆಯಲ್ಲಿದೆ)	242.52

ಮೇಲ್ಕಂಡ ಆರ್ಥಿಕ ಸಹಾಯವನ್ನು ಸರ್ಕಾರವು ಈ ಸಹಕಾರಿ ನೂಲಿನ ಗಿರಣಿಗಳಿಗೆ ಸಾಲವಾಗಿ ಮಂಜೂರು ಮಾಡಿದೆ.

ಮೇಲ್ಕಂಡ ಸಹಕಾರಿ ನೂಲಿನ ಗಿರಣಿಗಳಿಗೆ ಆರ್ಥಿಕ ನೆರವು ನೀಡಿರುವುದಲ್ಲದೆ ವಿಶ್ವ ಬ್ಯಾಂಕಿನ ನೆರವಿನಡಿ ಪ್ರಾರಂಭವಾದ ಈ ಕೆಳಕಂಡ 3 ಗಿರಣಿಗಳು ಎನ್‌ಸಿಡಿಸಿಯಿಂದ ಪಡೆದುಕೊಂಡ ಅವಧಿ ಸಾಲ ಹಾಗೂ ಸಾಲದ ಮೇಲಿನ ಬಡ್ಡಿಯನ್ನು ಎನ್‌ಸಿಡಿಸಿ ಸಂಸ್ಥೆಗೆ ಕಂತುಗಳ ರೂಪದಲ್ಲಿ ಪಾವತಿ ಮಾಡಲು ರಾಜ್ಯ ಸರ್ಕಾರವು ಒಪ್ಪಿದ್ದು, 30-6-2001ರವರೆಗೆ 3 ಗಿರಣಿಗಳ ಪರವಾಗಿ ಎನ್‌ಸಿಡಿಸಿಗೆ ಈ ಕೆಳಕಂಡಂತೆ ರೂ.3797.70 ಲಕ್ಷಗಳನ್ನು ಪಾವತಿಸಿರುತ್ತದೆ.

	ರೂ. ಲಕ್ಷಗಳಲ್ಲಿ
1. ಮಲಪ್ರಭಾ ಸಹಕಾರಿ ನೂಲಿನ ಗಿರಣಿ (ನಿ), ಸವದತ್ತಿ	851.12
2. ರೈತರ ಸಹಕಾರಿ ನೂಲಿನ ಗಿರಣಿ (ನಿ), ರಾಣೇಬೆನ್ನೂರು	1709.82
3. ವೆಂಕಟೇಶ್ ಸಹಕಾರಿ ನೂಲಿನ ಗಿರಣಿ (ನಿ), ಆಣ್ಣಿಗೇರಿ	1236.76
ಒಟ್ಟು	3797.70